ಏಕೆಂದರೆ ಭೀಷ್ಮರಂತಹ ಜ್ಞಾನಿಯ ಬಾಯಿಯಿಂದ ಈ ಮಾತು ಬಂದ ಮೇಲೆ ನಾನೀಗ ಸ್ವ ಅವಲೋಕನ ಮಾಡಿಕೊಳ್ಳಲೇಬೇಕಾಗಿದೆ...' ಎಂದು ಹ್ರಾಸವಾಗಿಯೇ ಮಾತನಾಡುತ್ತಾರೆ. ಕರ್ಮಲೇಪವಿದ್ದರೆ ಅವನು ಭಗವಂತ ಹೇಗಾಗುತ್ತಾನೆ ಎಂಬ ಇಂಗಿತಾರ್ಥ ಇರುವ ಮಾತುಗಳಿವು. ವಿನೋದಕ್ಕೆ ವಿನೋದವಾಗಿ ಮಾತಿಗೆ ಮಾತಾಗಿ, ವಾದಕ್ಕೆ ವಾದವಾಗಿ ಹೀಗೆ ಚರ್ಚೆಯು ಮುಂದುವರೆಯುತ್ತದೆ.

ಇನ್ನೊಂದು ಉದಾಹರಣೆ ಹೇಳುವುದಾರೆ ಬಲಿ ಚಕ್ರವರ್ತಿ ಮತ್ತು ವಾಮನ ಭೇಟಿಯ ಪ್ರಸಂಗ. ಶುಕ್ರಾಚಾರ್ಯರು ವಾಮನ ವಟುವಿನ ಬಗ್ಗೆ ಸಂಶಯದ ಮಾತುಗಳನ್ನು ಹೇಳುತ್ತಾರೆ. ಆಗ ಬಲಿ ಚಕ್ರವರ್ತಿಯ ಮಾತುಗಳು, 'ದೇವರು ಯಾವುದೇ ಅವತಾರವೆತ್ತಿ ಬಂದಿದ್ದಾರೆ ಎಂದು ಪ್ರಶ್ನಿಸುತ್ತ ಕೂರುವುದಿಲ್ಲ. ಅವತಾರವೆತ್ತಿ ಬಂದಿದ್ದಾರೆ ಎಂದರೆ ಅವರು ಒಳಿತನ್ನೇ ಮಾಡುತ್ತಾರೆ ಎಂದು ನಂಬಿದ್ದೇನೆ' ಎನ್ನುತ್ತ ಕುಲ ಗುರುಗಳಿಗೆ ಉತ್ತರಿಸುತ್ತಾನೆ. ಕೆಲವೊಮ್ಮೆ ಪಾತ್ರಗಳು ಎತ್ತುವ ಪ್ರಶ್ನೆಗಳು ಎಷ್ಟು ಚೂಪಾಗಿರುತ್ತವೆ ಎಂದರೆ... ಓ, ಪಾತ್ರಧಾರಿ ಸೋಲುತ್ತಿದ್ದಾನಲ್ಲ ಎಂದು ಪ್ರೇಕ್ಷಕರು ಆತಂಕ ಪಡುವುದುಂಟು. ಆದರೆ ಪ್ರತಿವೇಷದ ಪಾತ್ರಧಾರಿ ಸವಾಲುಗಳನ್ನು ದಾಟುತ್ತ, ಮರುಸವಾಲು ಹಾಕುವ ಪರಿ ವಿಶೇಷವಾದುದು. ಹಾಗೆಂದು ಎಲ್ಲ ಪಾತ್ರಧಾರಿಗಳು ಭಾರೀ ಪುಸ್ತಕಗಳನ್ನು ಓದಿಕೊಂಡೇ ಬಂದವರೇನೂ ಇರಬೇಕಿಲ್ಲ. ಯಕ್ಷಗಾನದ ಸೌಂದರ್ಯವೇ ಪಂಡಿತ ಪಾಮರರನ್ನು ಒಂದೇ ವೇದಿಕೆಯಲ್ಲಿ ಇರಿಸುವ ಸಾಧ್ಯತೆ. ಒಮ್ಮೆ ಅನಿವಾರ್ಯವಾಗಿ ಅರ್ಜುನ ಪಾತ್ರಧಾರಿಯಾಗಿ ಹೊಸಬರು ವೇದಿಕೆಗೆ ಗಡಿಬಿಡಿಯಿಂದ ಬರಬೇಕಾಯಿತು. ಹೆಚ್ಚು ವಾದ, ತರ್ಕಗಳನ್ನು ಮಾಡಿದ ಅಭ್ಯಾಸವಿನ್ನೂ ಅವರಿಗೆ ಇರಲಿಲ್ಲ. ಕುರುಕ್ಷೇತ್ರಕ್ಕೆ ಬಂದ ಅರ್ಜುನ, ಟಕ್ಕನೆ ಬಿಲ್ಲು ಬಾಣಗಳನ್ನು ಒಗೆದು, ' ಭಗವಂತಾ ಏನ್ ಮಾಡಬೇಕೆಂದು ಗೊತ್ತಾಗುತ್ತಿಲ್ಲ. ನನ್ನನ್ನು ಈ ಪರಿಸ್ಥಿತಿಯಲ್ಲಿ ಇಲ್ಲಿ ತಂದು ಹಾಕಿದ್ಯಲ್ಲಾ. ನಂಗೆ ಏನು ಮಾತನಾಡಬೇಕು, ಏನು ಹೇಳಬೇಕೆಂದು ಗೊತ್ತಾಗುತ್ತಿಲ್ಲ... ಇಂಥಾ ಪ್ರಸಂಗವೊಂದು ಬದುಕಿನಲ್ಲಿ ನನಗೆ ಬೇಕೋ...' ಎಂದು ಪ್ರಶ್ನಿಸುತ್ತಾನೆ. ಕೃಷ್ಣ ಪಾತ್ರಧಾರಿಯು ಇದೇ ಮಾತಿಗೆ ಪ್ರತಿಯಾಗಿ



ಭಗವದ್ಗೀತೆಯನ್ನು ಬೋಧನೆ ಮಾಡುತ್ತಾ ಕಥೆಯನ್ನು ಮುಂದುವರೆಸುತ್ತಾನೆ. ಈ ಸುಂದರ ಹೊಂದಾಣಿಕೆಯು ಕಥೆಗಳಿಗೆ ಹೊಸ ಹೊಸ ಹೊಳಪನ್ನು ಕೊಡುತ್ತ ಸಾಗುತ್ತದೆ.

ಇಂತಹ ಸಾವಿರಾರು ಉದಾಹರಣೆಗಳಿವೆ. ಮಾತಿನ ಸೌಂದರ್ಯವನ್ನು ಎಳೆಎಳೆಯಾಗಿ ಬಿಡಿಸಿಡಲು ಇದು ಚಂದದ ವೇದಿಕೆ ಎನ್ನಬಹುದು. ಮಕ್ಕಳಿದ್ದರೆ ಮನೆ ಸ್ವರ್ಗವೆಂದು ಎಲ್ಲ ಕಡೆಯೂ ಹೇಳುವುದು ವಾಡಿಕೆ. ಹೀಗೆ ಮಕ್ಕಳ ಮಹತ್ವವನ್ನು ಪಾತ್ರಧಾರಿ ಹೊಗಳುತ್ತಿದ್ದಾಗ, 'ಹಾಗಿದ್ದರೆ ಧೃತರಾಷ್ಟ್ರನಿಗೆ ಮಕ್ಕಳಿದ್ದಾರೆ. ಅವನಿಗೆ ಸ್ವರ್ಗ ಖಚಿತವೇ?' ಎಂಬ ಅಡ್ಡ ಪ್ರಶ್ನೆಯೊಂದು ಎದುರಾಯಿತು. 'ಮಕ್ಕಳಿಲ್ಲದವನಿಗೆ ಸ್ವರ್ಗವಿಲ್ಲ ಎಂಬುದು ಲೋಕರೂಢಿಯ ಮಾತಿರಬಹುದು. ಮಕ್ಕಳಿದ್ದವರಿಗೆ ಸ್ವರ್ಗ ಖಚಿತವೆಂಬ ಮಾತಿದೆಯಾ' ಎಂಬ ಮಾತಿನ ಬಾಣ ಸರಕ್ಕನೆ ಬಂದು ಬಿಡುವುದು. ಈ ವಾಗ್ವಿಲಾಸವೇ ತಾಳಮದ್ದಳೆಯ ಕಡೆಗೆ ಜನರನ್ನು ಆಕರ್ಷಿಸುವುದು.

- ತಾಳಮದ್ದಳೆಯಾಗಲೀ, ಯಕ್ಷಗಾನ ಪ್ರದರ್ಶನವಾಗಲೀ, ಪ್ರತಿನಾಯಕರೇ ಹೆಚ್ಚು